ಮಹಿಳೆಯರಿಗೆ ದೇವಸ್ಥಾನಗಳಲ್ಲಿ ಪ್ರವೇಶ

68 (246) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)

ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ರಾಜ್ಯದಲ್ಲಿ ಮಹಿಳೆಯರಿಗೆ ಎಲ್ಲಾ ದೇವಸ್ಥಾನಗಳನ್ನು ಪ್ರವೇಶಿಸಿ ಪೂಜೆ ಮಾಡಲು ಅವಕಾಶವಿದೆಯೇ

ಆ) ರಾಜ್ಯದಲ್ಲಿ ಮಹಿಳೆಯರಿಗೆ ಪ್ರವೇಶ ನಿಷೇದಿಸಿರುವ ದೇವಸ್ಥಾನಗಳಿವೆಯೇ

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಬಿ ನಾಗರಾಜ ಶೆಟ್ಟಿ

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಎಸ್ ಎಸ್ ಪಾಟೀಲ್ ಈ ಉತ್ತರ ತಾವು ನೋಡಬೇಕು ಅವರು ಈ ರೀತಿಯಾಗಿ ಉತ್ತರ ಕೊಟ್ಟರೆ ಹೇಗೆ? ಅವರ ಪಕ್ಕದಲ್ಲಿಯೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ಕುಳಿತಿದ್ದಾರೆ ನನ್ನ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಮಹಿಳೆಯರಿಗೆ ಎಲ್ಲಾ ದೇವಸ್ಥಾನಗಳನ್ನು ಪ್ರವೇಶಿಸಿ ಪೂಜೆ ಮಾಡಲು ಅವಕಾಶವಿದೆಯೆ? ಎಂದು ಕೇಳಿದ್ದಕ್ಕೆ ಅವರು ಹೌದು ಎಂದು ಉತ್ತರ ಕೊಟ್ಟಿದ್ದಾರೆ ಕಾಯಿದೆಯಲ್ಲಿದೆ ಅದನ್ನು ಒಪ್ಪೋಣ ನನ್ನ ಎರಡನೇ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಮಹಿಳೆಯರಿಗೆ ಪ್ರವೇಶ ನಿಷೇಧಿಸಿರುವ ದೇವಸ್ಥಾನಗಳಿವೆಯೇ? ಎಂದು ಕೇಳಿದ್ದಕ್ಕೆ ಇಲ್ಲ ಎಂದು

ಉತ್ತರ ಕೊಟ್ಟಿದ್ದಾರೆ ಮಹಿಳೆಯರನ್ನು ನಷೇಧ ಮಾಡಿರುವ ದೇವಸ್ಥಾನ ನಮ್ಮ ನಜರಿಗೆ ಬಂದಿಲ್ಲವೆ? ಎಷ್ಟು ತೋರಿಸಲಿ? ಬಹುಶಃ ದಲಿತ ಮಹಿಳೆಯರನ್ನಂತೂ ಯಾವ ಊರಿನಲ್ಲಿ ಯಾವ ದೇವಸ್ಥಾನದಲ್ಲೂ ಬಿಟ್ಟಿಲ್ಲ

ಶ್ರೀ ಆರ್ ಧ್ರುವನಾರಾಯಣ ಮಹಿಳೆಯರಿಗಷ್ಟೆ ಅಲ್ಲ ಪುರುಷರಿಗೂ ನಿಷೇಧವಿದೆ

ಶ್ರೀ ಎಸ್ ಎಸ್ ಪಾಟೀಲ್ ಅದು ಒಂದು ಕಡೆ ಇರಲಿ, ದಲಿತ ರೆಂದರೆ ದಲಿತರೆ ಇವತ್ತಿಗೂ ಕುಡ ಅಸ್ಪೃಷ್ಯತೆ ಆಚರಣೆ ನಿಂತಿಲ್ಲ ನಾನು ಆ ದೃಷ್ಟಿಯಿಂದ ದಲಿತರು ಇನ್ನುವ ಶಬ್ಧ ಹಾಕಿರಲಿಲ್ಲ ಏನು ಉತ್ತರ ಕೊಡುತ್ತಾರೆ ನೋಡೋಣ ಎಂದು ಬೇಕಾಗಿಯೇ ಹಾಕಿರಲಿಲ್ಲ ದಲಿತ ಮಹಿಳೆ ಅಲ್ಲವೆ? ಪ್ರಾಮಾಣಿಕವಾಗಿ ನೀವು ಹೇಳಿ ನೀವು ಮುಜರಾಯಿ ಸಚಿವರಾಗಿ ಈ ರೀತಿಯಾಗಿ ಸುಮ್ಮನೆ ಉತ್ತರ ಕೊಟ್ಟರೆ ಏನು ಮಾಡುವುದು? ಮಹಿಳೆಯರ ರಕ್ಷಣೆಗೆ ಹೋಗುವವರು ಯಾರು ಇದ್ದಾರೆ?

ಅಧಕ್ಷರು ಮಾನ್ಯ ಶ್ರೀರಾಮರೆಡ್ಡಿಯವರೆ ನಾನು ಮುಂದಿನ ಪ್ರಶ್ನೆಗೆ ಅವಕಾಶ ಕೊಟ್ಟಿದ್ದೇನೆ ಮಾನ್ಯ ಬಾಲಕೃಷ್ಣರವರನ್ನು ಸಹ ಕರೆದಿದ್ದೇನೆ

ಶ್ರೀಮತಿ ಭಾಗೀರಥಿ ಮುರುಳ ಸಿದ್ಧನಗೌಡ ಮಾನ್ಯ ಅಧ್ಯಕ್ಷರೆ, ನಮಗೂ ಅವಕಾಶ ಕೊಡಿ

ಶ್ರೀ ನೆ ಲ ನರೇಂದ್ರಬಾಬು ಮಹಿಳೆಯರ ಬಗ್ಗೆ ಪ್ರಶ್ನೆ ಇದೆ ಮಹಿಳೆಯರು ಮಾತನಾಡುವುದಕ್ಕೆ ತಾವು ಅವಕಾಶ ಕೊಡಿ

ಅಧ್ಯಕ್ಷರು ಈಗಾಗಲೇ ಮುಂದಿನ ಪ್ರಶ್ನೆಗೆ ಹೋಗಿದ್ದೇನೆ

ಶ್ರೀ ಆರ್ ಧ್ರುವನಾರಾಯಣ ಈ ಸರ್ಕಾರ ಮಹಿಳಾ ವಿರೋಧಿ ಸರ್ಕಾರವಾಗಿದೆ